ಶ್ರೀ ಎಚ್. ಟಿ. ಪುಟ್ಟಪ್ಪ.—ಹೀಗೆ ಕಟ್ಟಡ ಬಾಡಿಗೆಗೆ ಬೇಕೆಂದು ರೆಂಟ್ ಕಂಟ್ರೋಲರ್‌ರವರಿಗೆ ಬರೆದಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಬಿ. ರಾಚಯ್ಯ.—ವಿಶ್ವವಿದ್ಯಾಲಯದಲ್ಲಿ ಓದುತ್ತಿರುವ ನಿಮ್ಮ ಪಂಗಡದ ವಿದ್ಯಾರ್ಥಿಗಳಿಗೆ ಇಂಡಿಯಾ ಸರ್ಕಾರದ ವೇತನಗಳು ಬರುತ್ತಿರುವುದರಿಂದ ನಮ್ಮ ಸರ್ಕಾರಕ್ಕೆ ಹಣ ಉಳಿತಾಯವಾಗುತ್ತಿದೆಯಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ನಾವು ಕೊಡುತ್ತಿದ್ದಷ್ಟು ಭಾಗ ಉಳಿತಾಯವಾಗುತ್ತಿದೆ.

ಶ್ರೀ ಬಿ. ರಾಚಯ್ಯ.—ಉಳಿತಾಯವಾಗುತ್ತಿರುವ ಹಣದಿಂದ ಬೇರೆ ಕಟ್ಟಡವನ್ನು ಬಾಡಿಗೆಗೆ ತೆಗೆದುಕೊಳ್ಳಬಹುದೇ ? ವಿಶ್ವವಿದ್ಯಾನಿಲಯದ ಕೌನ್ಸಿಲ್‌ನವರು ಸೂಚಿಸಲಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದು ಖಾಯಂ ಆದ ಉಳಿತಾಯವೆಂದು ಹೇಳುವುದಕ್ಕಾಗುವುದಿಲ್ಲ. ಆದುದರಿಂದ ಹಾಗೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಬಿ. ರಾಚಯ್ಯ.—ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಕೊಡಬೇಕೆಂದು ಯೂನಿವರ್ಸಿಟಿ ಕೌನ್ಸಿಲ್‌ನವರು ಶಿಫಾರಸು ಮಾಡಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಾಡಿದ್ದಾರೆ.

ಶ್ರೀ ವಿ. ವೆಂಕಟಪ್ಪ.—ಈ ವಿದ್ಯಾರ್ಥಿಗಳನ್ನು ಜನರಲ್ ಹಾಸ್ಟೆಲುಗಳಿಗೆ ಸೇರಿಸುವುದಕ್ಕವಕಾಶವಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಾಗಾದರೆ ಬಹಳ ಸಂತೋಷ.

ಶ್ರೀ ವಿ. ವೆಂಕಟಪ್ಪ.—ಈಗ ಅವಕಾಶವಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅವಕಾಶವಿದೆ, ಸಾಧ್ಯವಾದರೆ ಸಂತೋಷ.

ಶ್ರೀ ವಿ. ವೆಂಕಟಪ್ಪ.—ಈ ಹಾಸ್ಟೆಲಿನಲ್ಲಿ ಸಾಕಾದಷ್ಟು ಸ್ಥಳವಿಲ್ಲವೆಂದು ಹೇಳುತ್ತೀರಿ, ಅದಕಾರಣ ಆ ವಿದ್ಯಾರ್ಥಿಗಳನ್ನು ಜನರಲ್ ಹಾಸ್ಟೆಲುಗಳಿಗೆ ಸೇರಿಸುವುದಕ್ಕೆ ಪ್ರಯತ್ನ ಮಾಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಜನರಲ್ ಹಾಸ್ಟೆಲುಗಳು ಈಗತಾನೇ ಪ್ರಾರಂಭವಾಗಿರುವುದರಿಂದ, ಇವರೂ ಸೇರಿದರೆ ಬಹಳ ಸಂತೋಷ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಜನರಲ್ ಹಾಸ್ಟೆಲುಗಳಿಗೆ ಇವರನ್ನು ಸೇರಿಸಿದರೆ, ಡಿಪ್ರೆಸ್ಡ್ ಕ್ಲಾಸ್‌ನವರಿಗೆ ಕೊಡುತ್ತಿರುವ ರಿಯಾಯಿತಿಗಳನ್ನು ಕೊಡುತ್ತೀರೊ ಇಲ್ಲವೊ ?

ಶ್ರೀ ಎ. ಜಿ. ರಾಮಚಂದ್ರರಾವ್.—ಈ ಭಾಗವನ್ನು ಯೋಚನೆ ಮಾಡಬೇಕು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಹಾಗೆ ಕೊಡುವುದು ಸರಿಯೋ ಅಲ್ಲವೋ ?

ಶ್ರೀ ಎ. ಜಿ. ರಾಮಚಂದ್ರರಾವ್.—ನನ್ನ ವೈಯಕ್ತಿಕ ಅಭಿಪ್ರಾಯದಲ್ಲಿ ಅದು ಒಳ್ಳೆಯದು.

Educational Facilities to Cobblers.

Q.—647. Sri C. H. LINGADEVARU (Chiknayakanahalli).—

Will the Government be pleased to state :—

whether all facilities for education are not being given to cobblers according to Depressed Class Rules ?

A.—Sri A. G. RAMACHANDRA RAO (Minister for Law and Education).—

No complaints have been received so far.

ಶ್ರೀ ಸಿ. ಎಚ್. ಲಿಂಗದೇವರು.—ಡಿಪ್ರೆಸ್ಡ್ ಕ್ಲಾಸ್ ರೂಲ್ಸ್ ಪ್ರಕಾರ ಮೋಚಿ ಜನಾಂಗಕ್ಕೂ ಅನುಕೂಲಗಳನ್ನು ಕೊಡುತ್ತಿದ್ದೀರಾ ? ಇವರೂ ಸೇರಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮೋಚಿ ಪಂಗಡದವರೂ ಸೇರಬೇಕೆಂದು ಗೊತ್ತಿದೆ. ಅವರಿಗೆ ಈ ಸೌಲಭ್ಯಗಳು ದೊರಕಿಲ್ಲವೆಂದು ನಮಗೆ ದೂರು ಯಾವುದೂ ಬಂದಿಲ್ಲ.

ಶ್ರೀ ಸಿ. ಎಚ್. ಲಿಂಗದೇವರು.—ನಾನು ಅನುಕೂಲಗಳನ್ನು ಇವರಿಗೆ ಕೊಟ್ಟಿಲ್ಲವೆ ಎಂದು ಕೇಳಿರುವುದಕ್ಕೆ ದೂರು ಬಂದಿಲ್ಲ ಎಂದು ಉತ್ತರ ಕೊಟ್ಟಿದ್ದೀರಿ.

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಸರಿಯಾಗಿದೆ. ದೂರು ಬಂದಿಲ್ಲದಿರುವುದರಿಂದ ಅವರಿಗೂ ದೊರಕಿದೆ ಎಂದು ನಮ್ಮ ಭಾವನೆ.

ಶ್ರೀ ಸಿ. ಎಚ್. ಲಿಂಗದೇವರು.—ಇತರ ಸೌಲಭ್ಯಗಳು, ಎಂದರೆ ಮನೆಗಳನ್ನು ಕಟ್ಟುವುದಕ್ಕೆ ಸಹಾಯ ಮುಂತಾದುವನ್ನು ಕೊಡುತ್ತಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಸಿ. ಎಚ್. ಲಿಂಗದೇವರು.—ಹಿಂದಿನ ಬಜೆಟ್ ಅಧಿವೇಶನದಲ್ಲಿ ಮುಖ್ಯ ಮಂತ್ರಿಗಳು ಇದನ್ನು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದರು.

ಅಧ್ಯಕ್ಷರು.—ಈ ಪ್ರಶ್ನೆಯಲ್ಲಿ ವಿದ್ಯಾ ಸೌಕರ್ಯದ ವಿಚಾರ ಕೇಳಿದ್ದೀರಿ, ಇದರಲ್ಲಿ ಮನೆ ಕಟ್ಟುವುದು ಬರುವುದಿಲ್ಲ.

ಶ್ರೀ ಆರ್. ಮುನಿಸ್ವಾಮಯ್ಯ.—Cobblers ಡಿಪ್ರೆಸ್ಡ್ ಕ್ಲಾಸ್‌ನಲ್ಲಿದ್ದಾರೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದ್ದಾರೆ.

ಶ್ರೀ ಎಸ್. ಸಿದ್ದಪ್ಪ.—ಮೋಚಿಕೆಲಸ ಮಾಡುವವರಲ್ಲಿ ಹರಿಜನರು ಮಾತ್ರ ಇದ್ದಾರೆಯೋ ಬೇರೆಯವರೂ ಇದ್ದಾರೆಯೋ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬೇರೆಯವರೂ ಇದ್ದಾರೆ, ಆದರೆ ವಿರಳ.

ಶ್ರೀ ಎಸ್. ಸಿದ್ದಪ್ಪ.—ಬೇರೆ ಜನರು ಮೋಚಿ ಕೆಲಸ ಮಾಡಿದರೆ ಅವರಿಗೂ ಇಂಥ ಅನುಕೂಲಗಳನ್ನು ಕಲ್ಪಿಸುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ, ಹಾಗಾಗುವುದಿಲ್ಲ.

Sri K. PUTTASWAMY.—What prevented the Government from ascertaining the information and supplying to the House, Sir ?

Sri A. G. RAMACHANDRA RAO.—We did ascertain. Our information is that these cobblers are included generally under the Depressed Classes and there have been no complaints of non-admission.

Sri K. PUTTASWAMY.—The question is whether all facilities for education are not being given to cobblers according to Depressed Class Rules. My supplementary question is, what prevented the Government

from ascertaining and furnishing definite information to this Assembly.

Sri A. G. RAMACHANDRA RAO.—The information is more definite. The facilities are being extended and no complaints are being received in this matter at all.

Mr. SPEAKER.—Sri T. Hanumiah may put the question on behalf of Sri Masiyappa.

Irrigation facilities to Naikanahatti Hobli in Challakere Taluk.

Q.—323. Sri T. HANUMIAH (Hiriyur—Scheduled Castes) [On behalf of Sri V. Masiyappa (Hiriyur)].—

Will the Government be pleased to state :—

(*a*) whether it has come to their notice that Naikanahatty Hobli in Challakere Taluk is a dry area in the taluk and that there is no source of irrigation except some small tanks ;

(*b*) whether they will examine the possibilities of providing a feeder channel from Jinige Halla of Sangenahalli tank ?

A.—Sri H. M. CHANNABASAPPA (Minister for Industries).—

(*a*) Yes.

(*b*) The estimate has been sanctioned and the work taken up for execution.

ಶ್ರೀ ಟಿ. ಹನುಮಯ್ಯ.—ಉತ್ತರದಲ್ಲಿ "the Estimate has been sanctioned and the work taken up for execution." ಎಂದು ಹೇಳಿದ್ದೀರಿ. ಈ ಎಸ್ಟಿಮೇಟು ಸಂಗೇನಹಳ್ಳಿ ಕೆರೆಗೆ ಸಂಬಂಧಪಟ್ಟದ್ದೋ ಅಥವಾ ಬೇರೆ ಫೀಡರ್ ಚಾನಲ್ಲಿಗೆ ಸಂಬಂಧಪಟ್ಟದ್ದೋ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಸಂಗೇನಹಳ್ಳಿ ಕೆಳಗೆ ಜಿನಿಗೆ ಹಳ್ಳಕ್ಕೆ ಸಂಬಂಧಪಟ್ಟದ್ದು. ಈಗಿರತಕ್ಕ ಚಾನಲ್ಲನ್ನು recondition ಮಾಡುವುದಕ್ಕಾಗಿ ಮಾಡಿದೆ.

ಶ್ರೀ ಟಿ. ಹನುಮಯ್ಯ.—ನಾನು ಕೇಳುತ್ತಿರುವುದು ಜಿನಿಗೆ ಹಳ್ಳದ ಫೀಡರ್ ಚಾನಲ್ಲನ್ನು ರಿಪೇರಿ ಮಾಡುವುದಕ್ಕೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವು ಹೇಳಿದ್ದನ್ನು ಮಾಡುವುದರಿಂದ ಸಂಗೇನಹಳ್ಳಿ ಕೆರೆಗೆ affect ಆಗುವುದರಿಂದ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎ. ಭೀಮಪ್ಪನಾಯಕ್.—ತಾವು ಹೇಳುವ ಚಾನಲ್ ಎಲ್ಲಿಂದ ಷುರುವಾಗುತ್ತದೆ, ಎಷ್ಟು ದೂರ ಹೋಗುತ್ತದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಗೊಲ್ಲರಹಟ್ಟಿಯ ಹತ್ತಿರ ಅಣೆಕಟ್ಟು ಇದೆ. ನೀರುಗುಂಟಕಲ್ಲಿನ ಹಳ್ಳಿ ಕೆರೆಗೆ ಬಂದು ಬೀಳುತ್ತದೆ.

ಶ್ರೀ ಎ. ಭೀಮಪ್ಪನಾಯಕ್.—ಇದರಿಂದ ಯಾವ ಯಾವ ಹಳ್ಳಿಗೆ ನೀರು ಒದಗುತ್ತದೆ ಮತ್ತು ಎಷ್ಟು ದೂರ ಹೋಗುತ್ತದೆ ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಗುಂಟಕಲ್ಲಿನ ಹಳ್ಳಿಕೆರೆ, ರಾಕನಕೆರೆ, ರಾಮಸಾಗರ, ಕೋಡಿಹಳ್ಳಿ ಕೆರೆಗೆ ನೀರೊದಗಿ ಒಟ್ಟು 1,400 ಎಕರೆ ಸಾಗುವಳಿಯಾಗುತ್ತದೆ.

ಶ್ರೀ ಎ. ಭೀಮಪ್ಪನಾಯಕ್.—ನೀವು ಹೇಳಿದ್ದೀರಲ್ಲಾ ಇಲ್ಲಿ ಜಿನಿಗೆ ಹಳ್ಳಕ್ಕೆ ಎಸ್ಟಿಮೇಟ್ ಮಾಡಿದ್ದೀರೆಂದು ಹೇಳಿದ್ದೀರಿ. ಅದರಿಂದ ತೆಗೆದಿರುವ ನಾರೆ ಎಷ್ಟು ದೂರಹೋಗುತ್ತದೆ, ಎಷ್ಟು ಎಕರೆಗಳಿಗೆ ಅನುಕೂಲವಾಗುತ್ತದೆಂಬುದನ್ನು ತಿಳಿಸಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವು ಕೇಳಿರುವುದು ಅದಲ್ಲ. ಜಿನಿಗೆ ಹಳ್ಳದಿಂದ ಬರುವ ಚಾನಲ್ಲನ್ನು ರೀಕಂಡಿಷನ್ ಮಾಡುವುದಕ್ಕೆ ಈ ಎಸ್ಟಿಮೇಟ್ ತಯಾರಿಸಲಾಗಿದೆ.

ಶ್ರೀ ಎ. ಭೀಮಪ್ಪನಾಯಕ್.—ಇದು ಎಲ್ಲಿಂದ ಷುರುವಾಗುತ್ತದೆ, ಎಷ್ಟು ದೂರದವರೆಗೆ ಹೋಗುತ್ತದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಜಿನಿಗೆ ಹಳ್ಳಕ್ಕೆ ಅಣೆಕಟ್ಟುವುದರಿಂದ ಷುರುವಾಗುತ್ತದೆ. ಏಳು ಮೈಲಿ ದೂರಹೋಗುತ್ತದೆ. ಒಟ್ಟು 1,400 ಎಕರೆಗಳ ಸಾಗಿಗೆ ಅನುಕೂಲವಾಗುತ್ತದೆ. ಗೊಲ್ಲರಹಟ್ಟಿ ಹತ್ತಿರ ಅಣೆಕಟ್ಟು ಕಟ್ಟಲಾಗುತ್ತದೆ. ಇದಕ್ಕೆ 54,000 ರೂಪಾಯಿ ಅಂದಾಜಾಗಿದೆ.

ಶ್ರೀ ಎ. ಭೀಮಪ್ಪನಾಯಕ್.—1,400 ಎಕರೆ ಗಳೆಂಬುದು ಹೊಸದಾಗಿ ಬರತಕ್ಕ ಜಮೀನೇ ಅಥವಾ ಹಳೆಯ ಜಮೀನೇ ?

Is it a fresh supply or additional supply ?

Sri H. M. CHANNABASAPPA.—I have already said that this is an improvement to the existing channel.

Sri A. BHEEMAPPA NAIK.—Will the Government consider the feasibility of giving water supply to Naikanahatty hobli afresh because it has not been given sufficient supply ?

Sri H. M. CHANNABASAPPA.—That question has been examined and if another anecut is built above Sangenahalli tank.

Sri A. BHEEMAPPA NAIK.—Sangenahalli is in Chitaldrug. I am talking of Naikanahatti which is in Challakere Taluk. . .

Mr. SPEAKER.—The Hon'ble Member will notice that in question (*b*) it is asked "whether they will examine the possibilities of providing a feeder channel from Jinige Halla of Sangenahalli tank ?"

Sri A. BHEEMAPPA NAIK.—After Sangenahalli, Jinige Halla continues to proceed further. Jinige Halla means, water will always "*Jinugu*". It is